FEBRUARY 02, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಭೌಗೋಳಿಕ ಮಾನ್ಯತೆ ಹೊಂದಿದ,** ನಂಜನಗೂಡು ರಸಬಾಳೆ; ಪ್ರಥಮ ಬಾರಿಗೆ, ದ್ವೀಪ ರಾಷ್ಟ್ರ ಮಾಲ್ದಿವ್ಸ್‌ಗೆ, ರಫ್ತು.
- **ಮೌಲ್ಯವರ್ಧಿತ ಕೃಷಿ** ಉತ್ಪನ್ನಗಳ, ಪ್ರಮುಖ ರಫ್ತು ರಾಷ್ಟ್ರವಾಗಿ ಭಾರತ – ವಿಜ್ಞಾನಿ ಹಿಮಾಂಶು ಪಾಠಕ.
- **2026–27ನೇ ಸಾಲಿನ,** ಕೇಂದ್ರದ ಮುಂಗಡಪತ್ರ ಮಂಡನೆ; ಭಾರತದ ಸುಧಾರಣಾ ವೇಗಕ್ಕೆ, ಹೊಸ ಶಕ್ತಿ ನೀಡಲಿದೆ – ತಜ್ಞರ ಅಭಿಮತ.
- **2025–26ನೇ ಸಾಲಿನ** ರಾಜ್ಯ ಬಜೆಟ್; ಬಳಕೆಯಾಗದೇ ಉಳಿದ ಅನುದಾನ, ಆರ್ ಅಶೋಕ, ಟೀಕೆ.

<><><>

**ಈಗ ವಾರ್ತೆಗಳ ವಿವರ**

<><><>

**ವಿಶಿಷ್ಟ ರುಚಿಯ, ನಂಜನಗೂಡು** ರಸಬಾಳೆ, ಭೌಗೋಳಿಕ ಮಾನ್ಯತೆ – ಜಿ.ಐ. ಟ್ಯಾಗ್‌ಪಡೆದಿದ್ದು, ಪ್ರಥಮ ಬಾರಿಗೆ, ದ್ವೀಪ ರಾಷ್ಟ್ರ ಮಾಲ್ದಿವ್ಸ್‌ಗೆ ರಫ್ತಾಗಿವೆ. ಹೊಸ ದಿಲ್ಲಿಯ, ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಂಚಾಲಿತ, ಮೈಸೂರು ಜಿಲ್ಲೆ, ಸುತ್ತೂರಿನ, ಜೆ.ಎಸ್.ಎಸ್. ಕೃಷಿ ವಿಜ್ಞಾನ ಕೇಂದ್ರ, ನಂಜನಗೂಡು ರಸಬಾಳೆಯನ್ನು, ಮಾಲ್ದಿವ್ಸ್ ಗ್ರಾಹಕರಿಗೆ ತಲುಪಿಸುವಲ್ಲಿ ಗಮನಾರ್ಹ ಕೆಲಸ ಮಾಡಿದೆ.

<><><>

**ಈ ಕುರಿತು ಒಂದು ವರದಿ.. …**

<><><>

***ಮೈಸೂರು ಜಿಲ್ಲೆ, ನಂಜನಗೂಡು ತಾಲೂಕಿನ, ಕುರಹಟ್ಟಿ ಗ್ರಾಮದ, ಕೆ.ಎಂ.ಶಿವರಾಜು ಹಾಗೂ ರವೀಶ ನಾಗಪ್ಪ ಅವರು ಬೆಳೆದ, 500 ಕಿಲೋ ರಸಬಾಳೆ ಹಾಗೂ 35 ಕಿಲೋ ವಿಳ್ಯದೆಲೆಯನ್ನು, ಎಜೆಂಟ್ ಇಮ್ರಾನ್ ಪಾಷಾ ಮೂಲಕ, ಮಾಲ್ದಿವ್ಸ್‌ಗೆ ರಫ್ತು***

***ಮಾಡಲಾಗಿದೆ. ನಂಜನಗೂಡು ರಸಬಾಳೆಯನ್ನು ಸುಮಾರು 85 ಹೆಕ್ಟರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಭಾರತೀಯ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಉತ್ತೇಜನಾ ಸಂಸ್ಥೆ ಅಪೇಡಾ ನೆರವಿನೊಂದಿಗೆ, ರವಾನಿಸಲಾದ, ನಂಜನಗೂಡು ರಸಬಾಳೆ ಹಾಗೂ ವಿಳ್ಯದೆಲೆಗೆ, ಮಾಲ್ದಿವ್ಸ್ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಹಾಗೂ ಅತ್ಯುತ್ತಮ ದರ ಬೆಳೆಗಾರರಿಗೆ, ದೊರೆತಿದೆ. ವಿದೇಶಕ್ಕೆ ರಫ್ತು ಮಾಡುವ ಮುನ್ನ, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯಲ್ಲಿ ಪ್ಯಾಕಿಂಗ್ ಮತ್ತು ಪ್ರೊಸೆಸ್ಸಿಂಗ್ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಸದ್ಯದಲ್ಲೇ ಬೆಳೆಗಾರರಿಗೆ, ಸಂಸ್ಕರಣೆ ಮತ್ತು ಪ್ಯಾಕಿಂಗ್ ತರಬೇತಿ ಕಾರ್ಯಾಗಾರ, ಸುತ್ತೂರಿನ ಜೆ.ಎಸ್.ಎಸ್. ಕೃಷಿ ವಿಜ್ಞಾನ ಕೇಂದ್ರದಲ್ಲಿ, ನಡೆಯಲಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸುತ್ತೂರಿನ ಜೆ.ಎಸ್.ಎಸ್.ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ, ಬಿ.ಎನ್.ಜ್ಞಾನೇಶ.***

<><><>

**ಆರತಿ (54) + ಕೆ.ವಿ.ಕೆ. ನಿರ್ದೇಶಕ ಬಿ.ಎನ್. ಜ್ಞಾನೇಶ ಧ್ವನಿ (60) ಸೆಕೆಂದುಗಳು**

<><><>

**ಭಾರತ, ಮೌಲ್ಯವರ್ಧಿತ ಕೃಷಿ** ಉತ್ಪನ್ನಗಳ, ಪ್ರಮುಖ ರಫ್ತು ರಾಷ್ಟ್ರವಾಗಿಹೊರಹೊಮ್ಮುತ್ತಿದೆ ಎಂದು, ಹೈದರಾಬಾದಿನ, ಪತಂಚೇರು, ಅರೇ ಶುಷ್ಕ ಉಷ್ಣ ವಲಯದ, ಅಂತಾರಾಷ್ಟ್ರೀಯ ಬೆಳೆ ಸಂಶೋಧನಾ ಸಂಸ್ಥೆಯ, ಮಹಾನಿರ್ದೇಶಕ, ಹಿಮಾಂಶು ಪಾಠಕ, ತಿಳಿಸಿದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಕೃಷಿ ಮಹಾವಿದ್ಯಾಲಯದ ಸಂಸ್ಥಾಪಕ, ಕೀರ್ತಿಶೇಷ ಎಸ್.ಡಬ್ಲ್ಯೂ ಮೆಣಸಿನಕಾಯಿ ಅವರ, ಜನ್ಮದಿನಾಚರಣೆ ಸ್ಮರಣಾರ್ಥ, ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ, ರೊಬೋಟಿಕ್ಸ್, ಡ್ರೋನ್ ಬಳಕೆ, ಜಿನೋಮ್ ಎಡಿಟಿಂಗ್, ಜಿನೋಮಿಕ್ಸ್, ಫೆನೋಮಿಕ್ಸ್ ಮುಂತಾದ ಯಂತ್ರ ಮತ್ತು ತಂತ್ರಾಂಶ ಅಧ್ಯಯನಗಳು ಮತ್ತು ಕೌಶಲ ಗಳಿಕೆ, ಕೃಷಿ ವಿಜ್ಞಾನಿಗಳಿಗೆ ಅನಿವಾರ್ಯ, ಎಂದರು. ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ, ಪಿ.ಎಲ್.ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಗೌರಾದೇವಿ ಮೆಣಸಿನಕಾಯಿ ಅವರ, ಶುಭಾಶಯಗಳನ್ನು ಸಭೆಗೆ ತಿಳಿಸಲಾಯಿತು.

<><><>

**2025–26ನೇ ಆರ್ಥಿಕ ವರ್ಷದ,** ಹತ್ತು ತಿಂಗಳ ಅವಧಿ ಪೂರ್ಣಗೊಂಡಿದ್ದು, ಕೇವಲ ಎರಡು ತಿಂಗಳ ಕಾಲಾವಕಾಶವಿದ್ದು; ಮುಂಗಡ ಪತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದಂತೆ, ಬಳಕೆಯಾಗದೇ ಉಳಿದ ಅನುದಾನ, ರಾಜ್ಯದ ಹಣಕಾಸು ನಿರ್ವಹಣೆಯ, ದುಃಸ್ಥಿತಿ ಸೂಚಿಸುತ್ತದೆ ಎಂದು, ವಿಧಾನಸಭೆ ವಿಪಕ್ಷ ನಾಯಕ, ಆರ್.ಅಶೋಕ ಟೀಕಿಸಿದ್ದಾರೆ. ಈ ವರೆಗೆ, ಬಿಡುಗಡೆಯಾದ ಅನುದಾನದಲ್ಲಿ, ಒಂದು ಲಕ್ಷ 31 ಸಾವಿರದ 272 ಕೋಟಿ ರೂಪಾಯಿ ಖರ್ಚಾಗದೇ ಉಳಿದಿದೆ. 94 ಸಾವಿರದ 761 ಕೋಟಿ 42 ಲಕ್ಷ ರೂಪಾಯಿ ಅನುದಾನ, ಇನ್ನೂ ಬಿಡುಗಡೆಯಾಗಬೇಕಿದೆ. ಸ್ವತಃ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ, ಇಲಾಖೆಗಳಿಗೆ ಸಮರ್ಪಕ ಅನುದಾನ ಒದಗಿಸದೇ, ಅಭಿವೃದ್ಧಿ ಕುಂಠಿತಗೊಂಡಿದೆ. ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು, ಆರೋಪಿಸಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**2026-27ನೇ ಸಾಲಿನ,** ಕೇಂದ್ರದ ಮುಂಗಡ ಪತ್ರವನ್ನು, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, 9ನೇ ಬಾರಿಗೆ, ಸಂಸತ್ತಿನಲ್ಲಿ ಮಂಡಿಸಿದರು.

<><><>

**ಸುಸ್ಥಿರತೆ ಮತ್ತು ಅಭಿವೃದ್ಧಿ,** ಈ ಎರಡು ಲಕ್ಷ್ಯಗಳನ್ನು ಗಮನದಲ್ಲಿರಿಸಿಕೊಂಡು, ಮಂಡಿಸಿದ, ದೂರದೃಷ್ಟಿಯ ಬಜೆಟ್ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಹೊಸ ದಿಲ್ಲಿಯಲ್ಲಿ ಶ್ಲಾಘಿಸಿದ್ದಾರೆ.

<><><>

**ಪ್ರಲ್ಹಾದ ಜೋಶಿ ಧ್ವನಿ 24 ಸೆಕೆಂದುಗಳು**

<><><>

**ಕರ್ನಾಟಕದ, ಕಂಗು, ಕೊಕ್ಕೊ ಹಾಗೂ** ಗೋಡಂಬಿ ಬೆಳೆಗಾರರ ಹಿತಕಾಯಲು, ಅನೇಕ ಪ್ರೋತ್ಸಾಹದಾಯಕ ಯೋಜನೆಗಳನ್ನು, ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾಗಿದೆ ಎಂದು, ಕೇಂದ್ರ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ, ಎಕ್ಸ್ ಮಾಧ್ಯಮದಲ್ಲಿ, ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

<><><>

**ಎಚ್.ಡಿ. ಕುಮಾರಸ್ವಾಮಿ ಧ್ವನಿ 44 ಸೆಕೆಂದುಗಳು**

<><><>

**ಪ್ರಸಕ್ತ ಸಾಲಿನ ಮುಂಗಡಪತ್ರ,** ದ್ವಿತೀಯ ಮತ್ತು ತೃತೀಯ ಹಂತದ ನಗರಗಳ, ಸಮಗ್ರ ಅಭಿವೃದ್ಧಿ ಹಾಗೂ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವ ಹೊಂದಿರುವುದು, ಆಶಾಭಾವ ಮೂಡಿಸಿದೆ ಎಂದು, ಧಾರವಾಡದ ಸೆಂಟರ್ ಫಾರ್ ಮಲ್ಟಿಡಿಸಿಪ್ಲಿನರಿ ರಿಸರ್ಚ್ – ಸಿ.ಎಂ.ಡಿ.ಆರ್. ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗದ, ಸಹಾಯಕ ಪ್ರಾಧ್ಯಾಪಕ, ಎಸ್.ವಿ. ಹನಗೋಡಿಮಠ, ಅಭಿಪ್ರಾಯ ಪಟ್ಟಿದ್ದಾರೆ.

<><><>

**ಡಾ. ಎಸ್.ವಿ.ಹನಗೋಡಿಮಠ ಧ್ವನಿ 50 ಸೆಕೆಂದುಗಳು**

<><><>

**ಮಂಗಳೂರಿನ ಪಿಲಿಕುಳ ಗಾಲ್ಫ್ ಕ್ಲಬ್ ವತಿಯಿಂದ,** ಕ್ರೀಡಾಪಟುಗಳಿಗೆ ತರಬೇತಿ ನೀಡಲು, ಮೇ 31ರ ಒಳಗೆ, ಗಾಲ್ಫ್ ಎಕ್ಸಲೆನ್ಸ್ ಅಕಾದೆಮಿ ಸ್ಥಾಪನೆಯಾಗಲಿದೆ ಎಂದು, ಗಾಲ್ಫ್ ಕ್ಲಬ್ ಕ್ಯಾಪ್ಟನ್, ಮನೋಜ್ ಶೆಟ್ಟಿ ತಿಳಿಸಿದ್ದಾರೆ. ಪಿಲಿಕುಳ ನಿಸರ್ಗ ಧಾಮದ, ಪಿಲಿಕುಳ ಗಾಲ್ಫ್ ಕ್ಲಬ್‌ನ್ನು 1999 ರಲ್ಲಿ ಆರಂಭಿಸಲಾಗಿದ್ದು, ಇತ್ತೀಚೆಗೆ, 18 ಹೋಲ್‌ಗಳ, ಫ್ಲಡ್‌ಲೈಟ್ ಗಾಲ್ಫ್ ಕೋರ್ಸ್ ಆಗಿ, ಮೇಲ್ದರ್ಜೆಗೆ ಏರಿಸಲಾಗಿದೆ, ಎಂದರು. ಅಕಾದೆಮಿ 20 ಬೇ ಗಾಲ್ಫ್ ತರಬೇತಿ ಸೌಲಭ್ಯವನ್ನು ಒಳಗೊಂಡಿರಲಿದೆ. ಅತ್ಯುನ್ನತ ದರ್ಜೆಯ ಅಭ್ಯಾಸ ಮತ್ತು ವೃತ್ತಿಪರ ತರಬೇತಿ ಪಡೆಯಲು, ಅನುಕೂಲವಾಗಲಿದೆ ಎಂದು, ಹೇಳಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು**

<><><>

- **ಭೌಗೋಳಿಕ ಮಾನ್ಯತೆ ಹೊಂದಿದ,** ನಂಜನಗೂಡು ರಸಬಾಳೆ; ಪ್ರಥಮ ಬಾರಿಗೆ, ದ್ವೀಪ ರಾಷ್ಟ್ರ ಮಾಲ್ದಿವ್ಸ್‌ಗೆ, ರಫ್ತು.
- **ಮೌಲ್ಯವರ್ಧಿತ ಕೃಷಿ** ಉತ್ಪನ್ನಗಳ, ಪ್ರಮುಖ ರಫ್ತು ರಾಷ್ಟ್ರವಾಗಿ ಭಾರತ – ವಿಜ್ಞಾನಿ ಹಿಮಾಂಶು ಪಾಠಕ.
- **2026–27ನೇ ಸಾಲಿನ,** ಕೇಂದ್ರದ ಮುಂಗಡಪತ್ರ ಮಂಡನೆ; ಭಾರತದ ಸುಧಾರಣಾ ವೇಗಕ್ಕೆ, ಹೊಸ ಶಕ್ತಿ ನೀಡಲಿದೆ – ತಜ್ಞರ ಅಭಿಮತ.
- **2025–26ನೇ ಸಾಲಿನ** ರಾಜ್ಯ ಬಜೆಟ್; ಬಳಕೆಯಾಗದೇ ಉಳಿದ ಅನುದಾನ, ವಿಧಾನಸಭೆ ವಿಪಕ್ಷ ನಾಯಕ, ಟೀಕೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>